# ಪ್ರವಾದಿ(ಸ)ರಿಗೆ ಸಿಹ್ರ್ ಮಾಡಲಾಗಿತ್ತೇ?

[هل سحر النبي صلى الله عليه وسلم؟ ]

[**Kannada –** ಕನ್ನಡ –كنادي ]

**ಅಶ್ಶೈಖ್ ಅಹ್ಮದ್ ಇಬ್ನ್ ಅಬ್ದಿಲ್ ಅಝೀಝ್ ಅಲ್‌ಕುಸಯ್ಯಿರ್**

**الشيخ أحمد بن عبد العزيز القصير**

**ಅನುವಾದ: ಮುಹಮ್ಮದ್ ಹಂಝ ಪುತ್ತೂರು**

**ترجمة: محمد حمزة بتوري**

IslamHouse.com

**1436 – 2015**

بِسْمِ اللهِ الرَّحْمَـنِ الرَّحِيم

ಪ್ರವಾದಿ(ﷺ)ರಿಗೆ ಸಿಹ್ರ್ ಮಾಡಲಾದ ಘಟನೆಯ ಬಗ್ಗೆ ಉಲಮಾಗಳು ಮೂರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದಾರೆ.

**ಮೊದಲನೆಯ ಅಭಿಪ್ರಾಯ:** ಪ್ರವಾದಿ(ﷺ)ರಿಗೆ ಸಿಹ್ರ್‌ನಿಂದಾಗಿ ಏನು ಬಾಧಿಸಿತೋ ಅದು ಕಾಯಿಲೆಗಳಲ್ಲಿ ಸೇರಿದ ಒಂದು ಕಾಯಿಲೆ ಮಾತ್ರವಾಗಿದೆ ಮತ್ತು ಅಸ್ವಸ್ಥತೆಯ ಒಂದು ಆಘಾತವಾಗಿದೆ. ಇದು ಇತರೆಲ್ಲ ಮನುಷ್ಯರಂತೆ ಪ್ರವಾದಿಗಳಿಗೂ ಸಂಭವಿಸಬಹುದಾಗಿದೆ. ಇದು ಅವರ ಪ್ರವಾದಿತ್ವ (ನುಬುವ್ವತ್)ವನ್ನು ನಿಷೇಧಿಸುವಂತಹ ಅಥವಾ ಅವಮಾನ ಮಾಡುವಂತಹ ವಿಷಯಗಳಲ್ಲಿ ಸೇರಿದ್ದಲ್ಲ. ಇದು ಅವರ ಸಂದೇಶವಾಹಕತ್ವ (ರಿಸಾಲತ್)ಕ್ಕೆ ಅಥವಾ ವಹ್ಯ್ (ದಿವ್ಯಸಂದೇಶ)ಗೆ ಹಾನಿಯನ್ನುಂಟು ಮಾಡಿಲ್ಲ. ಅಲ್ಲಾಹು [ಸುಬ್‌ಹಾನಹು ವತಆಲಾ] ಪ್ರವಾದಿ(ﷺ)ರವರನ್ನು ಸಂರಕ್ಷಿಸಿರುವುದು ಅವರ ಮತ್ತು ಸಂದೇಶವನ್ನು ತಲುಪಿಸಿಕೊಡುವುದರ ಮಧ್ಯೆ ತೊಡಕನ್ನುಂಟುಮಾಡುವ ವಿಷಯಗಳಿಂದ ಮಾತ್ರವಾಗಿದೆ. ಹಾಗೆಯೇ ಪ್ರವಾದಿ(ﷺ)ರವರು ಕೊಲೆಗೀಡಾಗುವುದರಿಂದಲೂ ಅಲ್ಲಾಹು ಅವರನ್ನು ಸಂರಕ್ಷಿಸಿದ್ದಾನೆ. ಆದರೆ ಅವರ ಶರೀರಕ್ಕೆ ತಗಲುವಂತಹ ಇತರ ಆಪತ್ತುಗಳಿಂದ ಅಲ್ಲಾಹು ಅವರಿಗೆ ರಕ್ಷಣೆ ನೀಡಿಲ್ಲ.

ಇದು ಅಲ್‌ಮಾಝಿರೀ [ನೋಡಿ: 'ಅಲ್‌ಮುಅಲ್ಲಿಮ್ ಬಿಫವಾಇದಿ ಮುಸ್ಲಿಮ್' 3/93], ಇಬ್ನುಲ್ ಕಯ್ಯಿಮ್ ಮತ್ತು ಅಲ್‌ಐನೀ [ನೋಡಿ: 'ಉಮ್ದತುಲ್ ಕಾರಿ' 15/98], ಅಸ್ಸನದೀ [ನೋಡಿ: 'ಹಾಶಿಯತು ಸ್ಸನದೀ ಅಲಾ ಸುನನಿ ನ್ನಸಾಈ' 7/113], ಇಬ್ನ್ ಬಾಝ್ [ನೋಡಿ: 'ಮಜ್ಮೂಉ ಫತಾವಾ ಇಬ್ನ್ ಬಾಝ್'] ಮೊದಲಾದ ಉಲಮಾಗಳ ಅಭಿಪ್ರಾಯವಾಗಿದೆ. [ನೋಡಿ: 'ಫತ್‌ಹುಲ್ ಬಾರಿ' 10/237, 'ನೈಲುಲ್ ಅವ್ತಾರ್' 17/211 ಇತ್ಯಾದಿ].

ಅಲ್‌ಕಾದೀ ಇಯಾದ್ ತಮ್ಮ 'ಅಶ್ಶಿಫಾ ಬಿತಅ್‌ರೀಫಿ ಹುಕೂಕಿಲ್ ಮುಸ್ತಫಾ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್' ಎಂಬ ಗ್ರಂಥದಲ್ಲಿ (2/113) ಹೇಳುತ್ತಾರೆ:

وَأَمَّا مَا وَرَدَ أَنَّهُ كَانَ يُخَيَّلُ إِلَيْهِ أَنَّهُ فَعَلَ الشَّيْءَ وَلَا يَفْعَلُهُ فَلَيْسَ فِي هَذَا مَا يُدْخِلُ عَلَيْهِ دَاخِلَةً فِي شَيْءٍ مِنْ تَبْلِيغِهِ أَوْ شَرِيعَتِهِ أَوْ يُقْدَحُ فِي صِدْقِهِ لِقِيَامِ الدَّلِيلِ وَالْإِجْمَاعِ عَلَى عِصْمَتِهِ مِنْ هَذَا

وَإِنَّمَا هَذَا فِيمَا يَجُوزُ طَرُوُّهُ عَلَيْهِ فِي أَمْرِ دُنْيَاهُ الَّتِي لَمْ يُبْعَثْ بِسَبَبِهَا وَلَا فُضِّلَ مِنْ أَجْلِهَا وَهُوَ فِيهَا عُرْضَةٌ لِلْآفَاتِ كَسَائِرِ الْبَشَرِ فَغَيْرُ بَعِيدٍ أَنْ يُخَيَّلَ إِلَيْهِ مِنْ أُمُورِهَا مَا لَا حَقِيقَةَ لَهُ ثُمَّ يَنْجَلِي عَنْهُ كَمَا كَانَ ...وَلَمْ يَأْتِ فِي خَبَرٍ مِنْهَا أَنَّهُ نُقِلَ عَنْهُ فِي ذَلِكَ قَوْلٌ بِخِلَافِ مَا كَانَ أُخْبِرَ أَنَّهُ فَعَلَهُ وَلَمْ يَفْعَلْهُ وَإِنَّمَا كَانَتْ خَوَاطِرَ وَتَخَيُّلَاتٍ

"ಪ್ರವಾದಿ(ﷺ)ರವರು ಒಂದು ಕೆಲಸವನ್ನು ಮಾಡದಿದ್ದರೂ ಅದನ್ನು ಮಾಡಿದಂತೆ ಅವರಿಗೆ ಭಾಸವಾಗುತ್ತಿತ್ತು ಎಂದು ಹದೀಸಿನಲ್ಲಿ ಬಂದಿರುವ ವಾಕ್ಯದ ಬಗ್ಗೆ ಹೇಳುವುದಾದರೆ ಸಂದೇಶವನ್ನು ತಲುಪಿಸಿಕೊಡುವುದರಲ್ಲಿ ಅಥವಾ ಅವರ ಶರೀಅತ್ತಿನಲ್ಲಿ ಏನಾದರೂ ಸೇರಿಹೋಗುವಂತದ್ದೇನೂ ಇಲ್ಲಿ ಉಂಟಾಗಿಲ್ಲ. ಅಥವಾ ಅವರ ಸತ್ಯಸಂಧತೆಯನ್ನು ಅವಹೇಳನ ಮಾಡುವಂತಹ ಯಾವುದೂ ಇಲ್ಲಿ ಘಟಿಸಿಲ್ಲ. ಯಾಕೆಂದರೆ ಇಂತಹ ವಿಷಯಗಳಿಂದ ಅವರನ್ನು ಸಂಪೂರ್ಣವಾಗಿ ಸಂರಕ್ಷಿಸಲಾಗಿದೆಯೆಂಬುದು ಪುರಾವೆಗಳಿಂದಲೂ ವಿದ್ವಾಂಸರ ಒಮ್ಮತಾಭಿಪ್ರಾಯ ದಿಂದಲೂ ಸ್ಥಾಪಿತವಾಗಿದೆ. ಇದು ಯಾವ ಐಹಿಕ ವಿಷಯಗಳಿಗಾಗಿ ಪ್ರವಾದಿ(ﷺ)ರವರನ್ನು ಕಳುಹಿಸಲಾಗಿಲ್ಲವೋ ಮತ್ತು ಯಾವ ಕಾರಣದಿಂದಾಗಿ ಅವರನ್ನು ಶ್ರೇಷ್ಠಗೊಳಿಸಲಾಗಿಲ್ಲವೋ ಅಂಥಹ ಐಹಿಕ ವಿಷಯಗಳಲ್ಲಿ ಸಂಭವಿಸ ಬಹುದಾದಂತಹ ಒಂದು ಘಟನೆಯಾಗಿದೆ.

ಆದ್ದರಿಂದ ಐಹಿಕ ವಿಷಯಗಳಲ್ಲಿ ಇತರೆಲ್ಲ ಮನುಷ್ಯರ ದೇಹಗಳಂತೆ ಅವರ ದೇಹವೂ ಅಪಾಯಗಳಿಗೆ ಒಡ್ಡಿಕೊಂಡಿದೆ. ಆದ್ದರಿಂದ ಅವರಿಗೆ ಸಂಭವಿಸಿದಂತೆ ವಾಸ್ತವವಲ್ಲದ ಒಂದು ಐಹಿಕ ಸಂಗತಿಯು ಸಂಭವಿಸಿದಂತೆ ಭಾಸವಾಗಿ ನಂತರ ಅದು ಅಪ್ರತ್ಯಕ್ಷವಾಗುವುದು ನಿರಾಕರಿಸುವಂತಹ ಒಂದು ಸಂಗತಿಯಲ್ಲ.... ಪ್ರವಾದಿ(ﷺ)ರವರು ಒಂದು ಕೆಲಸವನ್ನು ಮಾಡದಿದ್ದರೂ ಅದು ಮಾಡಿದಂತೆ ಭಾಸವಾಗುತ್ತಿತ್ತು ಎಂಬುದಕ್ಕೆ ವಿರುದ್ಧವಾಗಿ ಬೇರೇನೂ ಈ ವಿಷಯದಲ್ಲಿ ಅವರಿಂದ ವರದಿಯಾಗಿಲ್ಲ. ಆದ್ದರಿಂದ ಇವು ಕೇವಲ ಕಲ್ಪನೆಗಳು ಮತ್ತು ಭಾವನೆಗಳು ಮಾತ್ರವಾಗಿದ್ದವು."

ಇಬ್ನುಲ್ ಕಯ್ಯಿಮ್‌ರವರು ಹೇಳುತ್ತಾರೆ:

السِّحْرُ الَّذِي أَصَابَهُ صَلَّى اللَّهُ عَلَيْهِ وَسَلَّمَ كَانَ مَرَضًا مِنَ الْأَمْرَاضِ عَارِضًا شَفَاهُ اللَّهُ مِنْهُ وَلَا نَقْصَ فِي ذَلِكَ وَلَا عَيْبَ بِوَجْهٍ مَا فَإِنَّ الْمَرَضَ يَجُوزُ عَلَى الْأَنْبِيَاءِ وَكَذَلِكَ الْإِغْمَاءُ.

فَقَدْ أُغْمِيَ عَلَيْهِ الصَّلَاةُ وَالسَّلَامُ فِي مَرَضِهِ وَوَقَعَ حِينَ انْفَكَّتْ قَدَمُهُ وَجُحِشَ شِقُّهُ وَهَذَا مِنَ الْبَلَاءِ الَّذِي يَزِيدُهُ اللَّهُ بِهِ رِفْعَةً فِي دَرَجَاتِهِ وَنَيْلِ كَرَامَتِهِ وَأَشَدُّ النَّاسِ بَلَاءً الْأَنْبِيَاءُ فَابْتُلُوا مِنْ أُمَمِهِمْ بِمَا ابْتُلُوا بِهِ مِنَ الْقَتْلِ وَالضَّرْبِ وَالشَّتْمِ وَالْحَبْسِ فَلَيْسَ بِبِدْعٍ أَنْ يُبْتَلَى النَّبِيُّ صَلَّى اللَّهُ عَلَيْهِ وَسَلَّمَ مِنْ بَعْضِ أَعْدَائِهِ بِنَوْعٍ مِنَ السِّحْرِ كَمَا ابْتُلِيَ بِالَّذِي رَمَاهُ فَشَجَّهُ وَابْتُلِيَ بِالَّذِي أَلْقَى عَلَى ظَهْرِهِ السَّلَا وَهُوَ سَاجِدٌ وَغَيْرُ ذَلِكَ فَلَا نَقْصَ عَلَيْهِمْ وَلَا عَارَ فِي ذَلِكَ بَلْ هَذَا مِنْ كَمَالِهِمْ وَعُلُوِّ دَرَجَاتِهِمْ عِنْدَ اللَّهِ

“ಪ್ರವಾದಿ(ﷺ)ರಿಗೆ ಬಾಧಿಸಿದ ಸಿಹ್ರ್ ಕಾಯಿಲೆಗಳಲ್ಲಿ ಸೇರಿದ ಒಂದು ಕಾಯಿಲೆಯಾಗಿದೆ. ಅಲ್ಲಾಹು ಅವರನ್ನು ಅದರಿಂದ ಗುಣಪಡಿಸಿದನು. ಇದು ಅವರಿಗೆ ಒಂದು ಕೊರತೆಯಾಗಲಿ ಅಥವಾ ಯಾವುದೇ ರೀತಿಯ ನ್ಯೂನತೆಯಾಗಲಿ ಅಲ್ಲ. ಯಾಕೆಂದರೆ ಅಂಬಿಯಾಗಳಿಗೆ ಕಾಯಿಲೆ ಉಂಟಾಗುವುದು ಸಂಭವನೀಯವಾಗಿದೆ. ಹಾಗೆಯೇ ಮೂರ್ಛೆ ಹೋಗುವುದೂ ಸಹ. ಪ್ರವಾದಿ(ﷺ)ರವರು ಒಮ್ಮೆ ಕಾಯಿಲೆಯಿಂದಾಗಿ ಮೂರ್ಛೆ ಹೋಗಿದ್ದರು. ಒಮ್ಮೆ ಅವರ ಪಾದವು ಅಡಿ ತಪ್ಪಿದಾಗ ಅವರು ಬಿದ್ದರು ಮತ್ತು ಅವರ ಚರ್ಮವು ಗೀರಿ ಗಾಯವಾಗಿತ್ತು. ಇವೆಲ್ಲವೂ ಅಲ್ಲಾಹನ ಪರೀಕ್ಷೆಗಳಲ್ಲಿ ಸೇರಿದ್ದಾಗಿವೆ. ಇದರಿಂದಾಗಿ ಅವರ ಪದವಿಗಳಲ್ಲಿ ಮತ್ತು ಗೌರವದಲ್ಲಿ ಅಲ್ಲಾಹು ಔನ್ನತ್ಯವನ್ನು ಹೆಚ್ಚಿಸುತ್ತಾನೆ. ತೀಕ್ಷ್ಣವಾಗಿ ಪರೀಕ್ಷಿಸಲಾಗುವವರು ಅಂಬಿಯಾಗಳಾಗಿದ್ದಾರೆ. ಅವರನ್ನು ಅವರ ಜನತೆಗಳ ಮೂಲಕ ಕೊಲೆ, ಥಳಿತ, ಅವಹೇಳನ, ಸೆರೆ ಇತ್ಯಾದಿಗಳನ್ನು ಮಾಡಿಸಿ ಅಲ್ಲಾಹು ಪರೀಕ್ಷಿಸಿದ್ದಾನೆ. ಆದ್ದರಿಂದ ಪ್ರವಾದಿ(ﷺ)ರವರನ್ನು ಅವರ ಶತ್ರುಗಳ ಮೂಲಕ ಸಿಹ್ರ್‌ನ ಒಂದು ವಿಧವನ್ನು ಮಾಡಿಸಿ ಪರೀಕ್ಷಿಸಲಾಗಿರುವುದು ಹೊಸದೇನಲ್ಲ. ಅವರ ಶತ್ರುಗಳು ಅವರಿಗೆ ಕಲ್ಲೆಸೆಯುವ ಮೂಲಕ ಅವರಲ್ಲಿ ಗಾಯಗಳನ್ನು ಮೂಡಿಸಿ ಅವರನ್ನು ಪರೀಕ್ಷಿಸಲಾದಂತೆ. ಅವರು ಸುಜೂದ್ ಮಾಡುವಾಗ ಒಬ್ಬ ವ್ಯಕ್ತಿ ಅವರ ಬೆನ್ನ ಮೇಲೆ (ಒಂಟೆಯ) ಕರುಳನ್ನು ಹಾಕುವ ಮೂಲಕ ಅವರನ್ನು ಪರೀಕ್ಷಿಸಲಾದಂತೆ. ಹೀಗೆ ಅನೇಕ ವಿಧಗಳಲ್ಲಿ ಅವರನ್ನು ಪರೀಕ್ಷಿಸಲಾಗಿತ್ತು. ಇವಾವುದೂ ಅವರಿಗೆ ಒಂದು ಕೊರತೆಯಾಗಲಿ ಅವಮಾನವಾಗಲಿ ಅಲ್ಲ. ಬದಲಾಗಿ ಇವು ಅವರ ಪರಿಪೂರ್ಣತೆ ಮತ್ತು ಅಲ್ಲಾಹನ ಬಳಿ ಅವರಿಗಿರುವ ಉನ್ನತ ಪದವಿಗಳಲ್ಲಿ ಸೇರಿದ್ದಾಗಿವೆ.”

[ಬದಾಇಉಲ್ ಫವಾಇದ್ 2/192; ನೋಡಿ: ಝಾದುಲ್ ಮಆದ್ 4/124]

**ಎರಡನೆ ಅಭಿಪ್ರಾಯ:** ಸಿಹ್ರ್ ಪ್ರವಾದಿ(ﷺ)ರವರ ಬಾಹ್ಯ ಅಂಗಾಂಗಳ ಮೇಲೆ ಮಾತ್ರ ಪ್ರಭಾವ ಬೀರಿದೆ. ಅವರ ಹೃದಯ, ವಿಶ್ವಾಸ ಮತ್ತು

ಬುದ್ಧಿಯ ಮೇಲೆ ಅದು ಪ್ರಭಾವ ಬೀರಿಲ್ಲ. ‘ಅಲ್ಲಾಹು ತಮ್ಮನ್ನು ಜನರಿಂದ ರಕ್ಷಿಸುವನು’ ಎಂಬ ಆಯತ್ತಿನ ಅರ್ಥ ಅಲ್ಲಾಹು ಅವರ ಹೃದಯ ಮತ್ತು ವಿಶ್ವಾಸವನ್ನು ರಕ್ಷಿಸುವನು ಎಂದಾಗಿದೆಯೇ ಹೊರತು ಐಹಿಕ ಆಪತ್ತುಗಳಿಗೆ ಗುರಿಯಾಗುವುದರಿಂದ ಅವರ ದೇಹವನ್ನು ರಕ್ಷಿಸುವನು ಎಂದಲ್ಲ.

ಅಲ್‌ಕಾದೀ ಇಯಾದ್ [ನೋಡಿ: ಅಶ್ಶಿಫಾ 2/113], ಇಬ್ನ್ ಹಜರ್ ಅಲ್‌ಹೈತಮೀ [ನೋಡಿ: ಅಝ್ಝವಾಜಿರ್ 2/163–164] ಮೊದಲಾದವರು ಈ ಅಭಿಪ್ರಾಯವನ್ನು ಹೊಂದಿದ್ದಾರೆ.

**ಮೂರನೆ ಅಭಿಪ್ರಾಯ:** ಪ್ರವಾದಿ(ﷺ)ರವರಿಗೆ ಸಿಹ್ರ್ ಬಾಧಿಸಿದೆ ಎಂಬುದು ಶುದ್ಧಸುಳ್ಳಾಗಿದೆ. ಅದು ನಾಸ್ತಿಕರು ನಿರ್ಮಿಸಿದ ಕಟ್ಟುಕಥೆಯಾಗಿದೆ.

ಇದು ಮುಅ್‌ತಝಿಲೀಗಳ ವಾದವಾಗಿದೆ. [ನೋಡಿ: ಮಫಾತೀಹುಲ್ ಗೈಬ್ 32/172, ಉಮ್ದತುಲ್ ಕಾರಿ 21/280, ಇತ್ಯಾದಿ]

ಪ್ರವಾದಿ(ﷺ)ರವರಿಗೆ ಸಿಹ್ರ್ ಬಾಧಿಸಿದೆ ಎಂಬ ಅಭಿಪ್ರಾಯವನ್ನು ಸ್ವೀಕರಿಸಿದರೆ ಈ ಕೆಳಗಿನ ವಿಷಯಗಳನ್ನು ಸ್ವೀಕರಿಸುವುದು ಅನಿವಾರ್ಯವಾಗುತ್ತದೆಯೆಂದು ಸಿಹ್ರ್ ನಿಷೇಧಿಗಳು ವಾದಿಸುತ್ತಾರೆ.

1. ಅಂಬಿಯಾಗಳ ಮುಅ್‌ಜಿಝಾತ್‌ಗಳು ನಿರರ್ಥಕವಾಗಿವೆ ಮತ್ತು ವಿಮರ್ಶೆಗೆ ವಿಧೇಯವಾಗಿವೆ.

2. ಅಂಬಿಯಾಗಳ ಮುಅ್‌ಜಿಝಾತ್‌ಗಳು ಮತ್ತು ಮಾಟಗಾರರ ಕೃತ್ಯಗಳನ್ನು ಪರಸ್ಪರ ಮಿಶ್ರಗೊಳಿಸುವುದು ಅನಿವಾರ್ಯವಾಗುತ್ತದೆ.

3. ‘ನೀವು ಸಿಹ್ರ್ ಬಾಧಿಸಿದ ವ್ಯಕ್ತಿಯನ್ನಲ್ಲದೆ ಅನುಸರಿಸುತ್ತಿಲ್ಲ’ ಎಂಬ ಕುಫ್ಫಾರ್‌ಗಳ ಮಾತನ್ನು ನಿಜಪಡಿಸುವುದು ಅನಿವಾರ್ಯವಾಗುತ್ತದೆ. ಅದೇ ರೀತಿ ‘ನೀವು ಸಿಹ್ರ್ ಬಾಧಿಸಿದ ವ್ಯಕ್ತಿಗಳಲ್ಲಿ ಸೇರಿದವರೇ ಆಗಿರುವಿರಿ’ ಎಂದು ಸಾಲಿಹ್ ಮತ್ತು ಶುಐಬ್‌ರಿಗೆ ಅವರ ಜನತೆಯು ಹೇಳಿದ ಮಾತನ್ನು ಕೂಡ ನಿಜಪಡಿಸುವುದು ಅನಿವಾರ್ಯವಾಗುತ್ತದೆ.

4. ಸಿಹ್ರ್ ನಿಷೇಧಿಗಳು ಹೇಳುತ್ತಾರೆ: ಅಂಬಿಯಾಗಳ ಮೇಲೆ ಸಿಹ್ರ್ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಅದು ಅಲ್ಲಾಹು ಅವರಿಗೆ ನೀಡಿದ ಭದ್ರತೆ ಮತ್ತು ಸಂರಕ್ಷಣೆಯನ್ನು ನಿಷೇಧಿಸುತ್ತದೆ.

ಅದೇ ರೀತಿ ಪ್ರವಾದಿ(ﷺ)ರಿಗೆ ಸಿಹ್ರ್ ಮಾಡಲಾಗಿತ್ತು ಎಂಬ ಆಇಶಾ(ರ)ರವರ ಹದೀಸನ್ನು ಹಿಶಾಮ್ ಇಬ್ನ್ ಉರ್ವಾ(ರ)ರವರು ಅವರ ತಂದೆಯಿಂದ, ಅವರು ಆಇಶಾ(ರ)ರಿಂದ ಏಕಾಂಗಿಯಾಗಿ ವರದಿ ಮಾಡಿರುವುದರಿಂದ ಅದರಲ್ಲಿ ಅವರಿಗೆ ತಪ್ಪು ಸಂಭವಿಸಿದೆ. ಅವರಿಗೆ ಆ ವಿಷಯದಲ್ಲಿ ಗೊಂದಲವುಂಟಾಗಿದೆಯೆಂದು ಅವರು ಹೇಳುತ್ತಾರೆ.

ಇದಕ್ಕಿರುವ ಉತ್ತರ:

1. 'ನೀವು ಸಿಹ್ರ್ ಬಾಧಿಸಿದ ವ್ಯಕ್ತಿಯನ್ನಲ್ಲದೆ ಅನುಸರಿಸುತ್ತಿಲ್ಲ' ಮತ್ತು 'ನೀವು ಸಿಹ್ರ್ ಬಾಧಿಸಿದ ವ್ಯಕ್ತಿಗಳಲ್ಲಿ ಸೇರಿದವರೇ ಆಗಿರುವಿರಿ' ಎಂಬ ಸೂಕ್ತಿಗಳ ಬಗ್ಗೆ ಹೇಳುವುದಾದರೆ, ಈ ಸೂಕ್ತಿಗಳಲ್ಲಿ ಉದ್ದೇಶಿಸಲಾಗಿರುವುದು ಹುಚ್ಚನಾಗುವ ತನಕ ಸಿಹ್ರ್ ಮಾಡಿದ ಕಾರಣ ಬುದ್ಧಿಭ್ರಮಣೆಯಾಗಿ ಹುಚ್ಚನಾಗುವ ಸ್ಥಿತಿಯ ಬಗ್ಗೆಯಾಗಿದೆ. ಯಾಕೆಂದರೆ ಸಿಹ್ರ್ ಬಾಧಿತರ ಪೈಕಿ ಬುದ್ಧಿಭ್ರಮಣೆಯಾದವರನ್ನು ಜನರು ಹಿಂಬಾಲಿಸುವುದಿಲ್ಲ. ಕಾರಣ ಹುಚ್ಚರಂತೆ ಅವರು ಏನು ಹೇಳುತ್ತಿದ್ದಾರೆಂಬ ಪ್ರಜ್ಞೆ ಅವರಿಗೇ ಇರುವುದಿಲ್ಲ. ಆದ್ದರಿಂದಲೇ ಕುಫ್ಫಾರ್‌ಗಳು ಹೇಳಿದರು: 'ಕಲಿಸಲ್ಪಟ್ಟವನು, ಹುಚ್ಚನು.' [ಅದ್ದುಖಾನ್ 14]. ಆದರೆ ಜನರಿಗೆ ಬಾಧಿಸುವಂತಹ ಯಾವುದಾದರೂ ಕಾಯಿಲೆಯು ಬಾಧಿಸಿದ ವ್ಯಕ್ತಿಯ ಸ್ಥಿತಿ ಹೀಗಲ್ಲ. ಆತನನ್ನು ಅನುಸರಿಸುವುದರಿಂದ ಈ ಕಾಯಿಲೆಯು ಜನರನ್ನು ತಡೆಗಟ್ಟುವುದಿಲ್ಲ. ಆದರೆ ಪ್ರವಾದಿಗಳ ಶತ್ರುಗಳು ಪ್ರವಾದಿಗಳ ಮೇಲೆ ದೈಹಿಕ ಕಾಯಿಲೆಯ ಆರೋಪ ಹೊರಿಸಿರಲಿಲ್ಲ. ಅವರು ಹೊರಿಸಿದ ಆರೋಪವು ಪ್ರವಾದಿಗಳನ್ನು ಅನುಸರಿಸಿದ ಅನುಯಾಯಿಗಳ ಪೈಕಿ ತಿಳಿಗೇಡಿಗಳನ್ನು ಭಯಪಡಿಸುವಂತಹ ವಿಷಯವಾಗಿತ್ತು. ಅಂದರೆ ಪ್ರವಾದಿಗಳಿಗೆ ಸಿಹ್ರ್ ತಗುಲಿ ಅವರು ಹುಚ್ಚರಾಗಿರುವುದರಿಂದ ಅವರು ಏನು

ಹೇಳುತ್ತಿದ್ದಾರೆಂಬುದು ಅವರಿಗೇ ತಿಳಿದಿಲ್ಲ, ಆದ್ದರಿಂದ ಅವರನ್ನು ಹಿಂಬಾಲಿಸಬೇಡಿ ಎಂಬ ವಿಷಯವಾಗಿತ್ತು. ಆದ್ದರಿಂದಲೇ ಅಲ್ಲಾಹು ಅವರ ಬಗ್ಗೆ ಹೇಳಿದನು: 'ನೋಡಿರಿ, ಅವರು ತಮ್ಮ ಬಗ್ಗೆ ಹೇಗೆ ಉದಾಹರಣೆಗಳನ್ನು ತೋರಿಸಿಕೊಡುತ್ತಿದ್ದಾರೆ. ಇದರಿಂದಾಗಿ ಅವರು ಪಥಭ್ರಷ್ಟರಾಗಿರುವರು ಮತ್ತು ನೇರಮಾರ್ಗವನ್ನು ಪಡೆಯಲು ಅವರಿಗೆ ಸಾಧ್ಯವಾಗದು.' [ಅಲ್‌ಇಸ್ರಾಅ್ 48]

2. ಅಂಬಿಯಾಗಳಿಗೆ ಸಿಹ್ರ್ ಬಾಧಿಸುತ್ತದೆ ಎಂದಾದರೆ ಅದು ಅವರಿಗೆ ಅಲ್ಲಾಹು ಒದಗಿಸಿದ ಸಂರಕ್ಷಣೆಯನ್ನು ನಿಷೇಧಿಸುತ್ತದೆ ಎಂಬ ಸಿಹ್ರ್ ನಿಷೇಧಿಗಳ ವಾದದ ಬಗ್ಗೆ ಹೇಳುವುದಾದರೆ, ಅಲ್ಲಾಹು [ಸುಬ್‌ಹಾನಹು ವತಆಲಾ] ಅವರನ್ನು ಕಾಪಾಡುವಂತೆ, ಅವರಿಗೆ ರಕ್ಷಣೆ ಒದಗಿಸುವಂತೆ ಮತ್ತು ಅವರನ್ನು ಸಂರಕ್ಷಿಸುವಂತೆ ಕುಫ್ಫಾರ್‌ಗಳ ಕಿರುಕುಳ ಮತ್ತು ಉಪಟಳಗಳ ಪೈಕಿ ತಾನು ಇಚ್ಛಿಸುವುದರ ಮೂಲಕ ಅವರನ್ನು ಪರೀಕ್ಷಿಸುವುದನ್ನೂ ಮಾಡುತ್ತಾನೆ. ಇದು ಅಲ್ಲಾಹು ಅವರಿಗೆ ಗೌರವವನ್ನು ಸಮಗ್ರವಾಗಿ ನೀಡುವುದಕ್ಕಾಗಿ ಅವರನ್ನು ಅರ್ಹಗೊಳಿಸುವುದಾಗಿದೆ. ಅದೇ ರೀತಿ ಅವರ ಸಮುದಾಯದಲ್ಲಿರುವ ಅವರ ಅನುಯಾಯಿಗಳಿಗೆ ಕುಫ್ಫಾರ್‌ಗಳಿಂದ ಯಾವುದಾದರೂ ಉಪಟಳಗಳುಂಟಾದರೆ ಅವರು ಕೂಡ ಆ ಪ್ರವಾದಿಗಳಂತೆ ತಾಳ್ಮೆ ವಹಿಸಬೇಕೆಂದು ಅವರಿಗೆ ಕಲಿಸಿಕೊಡುವುದಕ್ಕಾಗಿದೆ. [ನೋಡಿ: ಬದಾಇಉಲ್ ಫವಾಇದ್ 2/192–193 ಮತ್ತು ಮಫಾತೀಹುಲ್ ಗೈಬ್ 32/172]

3. ಪ್ರವಾದಿ(ﷺ)ರವರಿಗೆ ಸಿಹ್ರ್ ಮಾಡಲಾಗಿತ್ತು ಎಂಬ

ಆಇಶಾ(ರ)ರವರ ಹದೀಸನ್ನು ಹಿಶಾಮ್ ಇಬ್ನ್ ಉರ್ವಾ(ರ)ರವರು ಏಕಾಂಗಿಯಾಗಿ ವರದಿ ಮಾಡಿದ್ದಾಗಿದೆ ಎಂಬ ಸಿಹ್ರ್ ನಿಷೇಧಿಗಳ ವಾದದ ಬಗ್ಗೆ ಹೇಳುವುದಾದರೆ ಅದು ಹದೀಸ್ ವಿದ್ವಾಂಸರ ಪ್ರಕಾರ ತಿರಸ್ಕೃತ ವಾದವಾಗಿದೆ. ಯಾಕೆಂದರೆ ಹಿಶಾಮ್ ಇಬ್ನ್ ಉರ್ವಾ ವರದಿಗಾರರ ಪೈಕಿ ಅತ್ಯಂತ ವಿಶ್ವಾಸಯೋಗ್ಯರೂ ಅತ್ಯಧಿಕ ಪಾಂಡಿತ್ಯವುಳ್ಳವರೂ ಆಗಿದ್ದಾರೆ. ಅವರ ಹದೀಸನ್ನು ತಿರಸ್ಕರಿಸುವಂತಹ ವಿಧದಲ್ಲಿ ಅವರಲ್ಲಿ ಯಾವುದೇ

ನ್ಯೂನತೆಯಿರುವುದಾಗಿ ವಿದ್ವಾಂಸರಲ್ಲಿ ಯಾರೂ ಹೇಳಿಲ್ಲ. ಮಾತ್ರವಲ್ಲದೆ ಈ ಹದೀಸನ್ನು ಅಲ್‌ಬುಖಾರಿ ಮತ್ತು ಮುಸ್ಲಿಮ್ ಜಂಟಿಯಾಗಿ ಉದ್ಧರಿಸಿದ್ದಾರೆ. ಹದೀಸ್ ವಿದ್ವಾಂಸರ ಪೈಕಿ ಯಾರೂ ಕೂಡ ಈ ಹದೀಸಿನ ಬಗ್ಗೆ ಚಕಾರವೆತ್ತಿಲ್ಲ. ಮಾತ್ರವಲ್ಲದೆ ಈ ಹದೀಸನ್ನು ತಫ್ಸೀರ್‌ನ ವಿದ್ವಾಂಸರು, ಸುನನ್‌ನ ವಿದ್ವಾಂಸರು, ತಾರೀಖ್ ಮತ್ತು ಫಿಕ್‌ಹ್‌ನ ವಿದ್ವಾಂಸರೂ ಕೂಡ ಅಂಗೀಕರಿಸಿದ್ದಾರೆ. ಪ್ರವಾದಿ(ﷺ)ರವರ ಸ್ಥಿತಿಗತಿಗಳ ಬಗ್ಗೆ ಇತರೆಲ್ಲರಿಗಿಂತಲೂ ಹೆಚ್ಚು ಅರಿವುಳ್ಳವರು ಅವರಾಗಿದ್ದಾರೆ.

ಇನ್ನು ಈ ಹದೀಸನ್ನು ಹಿಶಾಮ್ ಇಬ್ನ್ ಉರ್ವಾ(ﷺ) ಏಕಾಂಗಿಯಾಗಿ ವರದಿ ಮಾಡಿದ್ದಲ್ಲ. ಬದಲಾಗಿ ಅಲ್‌ಅಅ್‌ಮಶ್ ಕೂಡ ಇದನ್ನು ವರದಿ ಮಾಡಿದ್ದಾರೆ. [ನೋಡಿ: ಮುಸನ್ನಫ್ ಇಬ್ನ್ ಅಬೀ ಶೈಬಾ 5/40, ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ 4/367, ಸುನನು ನ್ನಸಾಈ 4080, ಬದಾಇಉಲ್ ಫವಾಇದ್ 2/191; ಅಶ್ಶೈಖ್ ಅಲ್‌ಅಲ್ಬಾನೀ ತಮ್ಮ 'ಸಹೀಹ್ ಸುನನಿ ನ್ನಸಾಈ' ಎಂಬ ಗ್ರಂಥದಲ್ಲಿ (3/98) ಇದನ್ನು ಸಹೀಹ್ ಎಂದಿದ್ದಾರೆ.]

ಆದ್ದರಿಂದ ಪ್ರವಾದಿ(ﷺ)ರಿಗೆ ಸಿಹ್ರ್ ಬಾಧಿಸಿಲ್ಲ ಎಂಬ ಸಿಹ್ರ್ ನಿಷೇಧಿಗಳ ವಾದದಲ್ಲಿ ಯಾವುದೇ ಹುರುಳಿಲ್ಲ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********